# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 992 |
| ಸದಸ್ಯರ ಹೆಸರು | ಶ್ರೀ ಬಸನಗೌಡ ಬಾದರ್ಲಿ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 25-08-2026 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಮೂರು ವರ್ಷಗಳಲ್ಲಿ ಸಿಂಧನೂರು ತಾಲ್ಲೂಕಿನಲ್ಲಿ ಭತ್ತ ಸೇರಿದಂತೆ ಪ್ರಮುಖ ಬೆಳೆಗಳಲ್ಲಿ ಕಂಡುಬಂದಿರುವ ಪ್ರಮುಖ ಕೀಟ ಮತ್ತು ರೋಗಬಾಧೆಗಳ ಪ್ರಮಾಣವನ್ನು ಕೃಷಿ ಇಲಾಖೆಯು ವೈಜ್ಞಾನಿಕವಾಗಿ ದಾಖಲಿಸಿಕೊಂಡಿದೆಯೇ; ದಾಖಲಿಸಿಕೊಂಡಿದ್ದಲ್ಲಿ, ವರ್ಷವಾರು ವಿವರಗಳೇನು; | ಕಳೆದ ಮೂರು ವರ್ಷಗಳಲ್ಲಿ ಸಿಂಧನೂರು ತಾಲ್ಲೂಕಿನಲ್ಲಿ ಭತ್ತ ಸೇರಿದಂತೆ ಪ್ರಮುಖ ಬೆಳೆಗಳಲ್ಲಿ ಕಂಡುಬಂದಿರುವ ಪ್ರಮುಖ ಕೀಟ ಮತ್ತು ರೋಗ ಬಾಧೆಗಳ ಮಾಹಿತಿಯನ್ನು ಕೃಷಿ ಇಲಾಖೆಯು ವೈಜ್ಞಾನಿಕವಾಗಿ ದಾಖಲಿಸಿಕೊಂಡಿದ್ದು, ಕೈಗೊಂಡ ಕೀಟ/ ರೋಗಗಳ ಸಮೀಕ್ಷೆಯ ವಿವರ ಕೆಳಕಂಡಂತಿರುತ್ತದೆ. |

| ವರ್ಷ | ಬೆಳೆ | ಕೀಟ (ಸಂಖ್ಯೆ) | ರೋಗ (ಸಂಖ್ಯೆ) |
|---|---|---|---|
| 2023-24 | ಭತ್ತ | 1760 | 990 |
| | ಜೋಳ | 390 | 156 |
| | ಸೂರ್ಯಕಾಂತಿ | 156 | 94 |
| | **ಒಟ್ಟು** | **2306** | **1240** |
| 2024-25 | ಭತ್ತ | 11567 | 5470 |
| | ಜೋಳ | 3023 | 1287 |
| | ಸೂರ್ಯಕಾಂತಿ | 887 | 930 |
| | **ಒಟ್ಟು** | **15477** | **7687** |
| 2025-26 | ಭತ್ತ | 3439 | 1782 |
| | ಜೋಳ | 4193 | 1943 |
| | ಸೂರ್ಯಕಾಂತಿ | 746 | 1063 |
| | **ಒಟ್ಟು** | **8378** | **4788** |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ರೈತರು ಕೀಟಬಾಧೆ ನಿಯಂತ್ರಿಸಲು ಅಗತ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಅಥವಾ ಅಪಾಯಕಾರಿ ಕೀಟನಾಶಕಗಳನ್ನು ಬಳಸುತ್ತಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕೆಲವಡೆ ಶಿಫಾರಸ್ಸು ಮಾಡಿರುವ ಪೀಡೆನಾಶಕ ಮತ್ತು ಪೀಡೆನಾಶಕಗಳ ಪ್ರಮಾಣವನ್ನು ಉಪಯೋಗಿಸದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. |

| | | |
|---|---|---|
| (ಇ) | ಬಂದಿದ್ದಲ್ಲಿ, ಸಿಂಧನೂರು ತಾಲ್ಲೂಕಿನಲ್ಲಿ ಕೀಟನಾಶಕಗಳ ಅವೈಜ್ಞಾನಿಕ ಬಳಕೆಯನ್ನು ತಡೆಯಲು ಸಮಗ್ರ ಕೀಟ ನಿರ್ವಹಣೆ (Integrated Pest Management-IPM) ಪದ್ಧತಿಯನ್ನು ಅಳವಡಿಸಿಕೊಳ್ಳುವಂತೆ; ರೈತರಿಗೆ ತರಬೇತಿ. ಕ್ಷೇತ್ರ ಪ್ರದರ್ಶನ ಮತ್ತು ತಾಂತ್ರಿಕ ಮಾರ್ಗದರ್ಶವನ್ನು ಕಳೆದ ಮೂರು ವರ್ಷಗಳಲ್ಲಿ ಎಷ್ಟು ಗ್ರಾಮಗಳಲ್ಲಿ ನೀಡಲಾಗಿದೆ; | ಸಿಂಧನೂರು ತಾಲೂಕಿನಲ್ಲಿ ಸುರಕ್ಷಿತ ಕೀಟನಾಶಕ ಬಳಕೆ ಮತ್ತು ಸಮಗ್ರ ಕೀಟ ನಿರ್ವಹಣೆಗಾಗಿ (IPM) ರೈತರಿಗೆ ತರಬೇತಿ, ನೇರ ತಾಂತ್ರಿಕ ಮಾರ್ಗದರ್ಶನ, ಕೀಟ-ರೋಗಗಳ ಗುರುತಿಸುವಿಕೆ ಜೊತೆಗೆ ಹತೋಟಿ ಕ್ರಮಗಳ ತಾಂತ್ರಿಕ ಮಾಹಿತಿ ಕುರಿತು ಪ್ರಾತ್ಯಕ್ಷಿಕೆ ಮುಖಾಂತರ ಅರಿವು ಮೂಡಿಸಲಾಗುತ್ತಿದೆ. ವಿವರ ಕೆಳಕಂಡಂತಿದೆ.<br><br>ವರ್ಷ / ಗ್ರಾಮಗಳ ಸಂಖ್ಯೆ / ಭಾಗವಹಿಸಿದ ರೈತರ ಸಂಖ್ಯೆ:<br>2023-24 / 40 / 1450<br>2024-25 / 50 / 1750<br>2025-26 / 65 / 2275<br><br>ತಾಲ್ಲೂಕಿನಲ್ಲಿ ಸ್ಥಾಪಿಸಲಾಗಿರುವ ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯದ (ಕೃಷಿ ಸಂಜೀವಿನಿ) ಹಾಗೂ ರೈತ ಸಂಪರ್ಕ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುವ ತಾಂತ್ರಿಕ ಸಿಬ್ಬಂದಿಗಳ ಮೂಲಕ ಅಗತ್ಯವಿರುವ ತಾಂತ್ರಿಕ ಸಲಹೆ, ಕೀಟನಾಶಕಗಳ ಅವೈಜ್ಞಾನಿಕ ಬಳಕೆಯನ್ನು ತಡೆಯಲು ಸಮಗ್ರ ಕೀಟ ನಿರ್ವಹಣೆ ಪದ್ಧತಿಗಳನ್ನು ಅಳವಡಿಸಲು ಸಲಹೆಗಳನ್ನು ನೇರವಾಗಿ ರೈತರ ತಾಕುಗಳಲ್ಲಿ ನೀಡುವ ಮೂಲಕ ಮಾರ್ಗದರ್ಶನ ನೀಡಲಾಗುತ್ತಿದೆ. |
| (ಈ) | ರೈತರಿಗೆ ಕೀಟಬಾಧೆ ಕಾಣಿಸಿಕೊಂಡ ತಕ್ಷಣ ಸರಿಯಾದ ಕೀಟನಾಶಕ ಮತ್ತು ಅದರ ಪ್ರಮಾಣದ ಕುರಿತು ವೈಜ್ಞಾನಿಕ ಸಲಹೆ ದೊರೆಯಲು ಮೊಬೈಲ್ ಆಧಾರಿತ ಕೀಟ-ರೋಗ ಪತ್ತೆ ತಾಂತ್ರಿಕ ವ್ಯವಸ್ಥೆಯನ್ನು; ಸಿಂಧನೂರು ತಾಲ್ಲೂಕಿನಲ್ಲಿ ಪರಿಣಾಮಕಾರಿಯಾಗಿ ಜಾರಿಗೆ ಸರ್ಕಾರ ಕ್ರಮ ಕೈಗೊಳ್ಳುವುದೇ? | ರೈತರಿಗೆ ಕೀಟ/ರೋಗ ಬಾಧೆಗೆ ಅಗತ್ಯವಿರುವ ತಾಂತ್ರಿಕ ಸಲಹೆಗಳನ್ನು ಸಕಾಲದಲ್ಲಿ ನೀಡಲು ಕೆಳಕಂಡಂತೆ ಕ್ರಮಗಳನ್ನು ವಹಿಸಲಾಗುತ್ತಿದೆ.<br>• ಬೆಳೆಗಳಲ್ಲಿ ಕಂಡುಬರುವ ಕೀಟ/ ರೋಗ ಬಾಧೆ ಹಾಗೂ ಪೋಷಕಾಂಶಗಳ ಕೊರತೆಯನ್ನು ನಿಖರವಾಗಿ ಗುರುತಿಸಿ, ಪೀಡೆ ಬಾಧೆಯ ತೀವ್ರತೆಗನುಗುಣವಾಗಿ ನಿರ್ವಹಣಾ ಕ್ರಮಗಳನ್ನು ರೈತರಿಗೆ ತಲುಪಿಸಲು ರಾಯಚೂರು ಕೃಷಿ ವಿಶ್ವವಿದ್ಯಾಲಯ ಅಭಿವೃದ್ಧಿಪಡಿಸಿರುವ ವಿನೂತನ ತಂತ್ರಜ್ಞಾನವಾದ ಇ-ಸ್ಯಾಪ್ ಮೊಬೈಲ್ ಆಪ್ ಅನ್ನು ಸಿಂಧನೂರು ತಾಲ್ಲೂಕು ಸೇರಿದಂತೆ, ರಾಜ್ಯಾದ್ಯಂತ ಇಲಾಖೆಯ ಮೂಲಕ ಅಳವಡಿಸಿಕೊಳ್ಳಲಾಗಿದೆ. ಪ್ರಸ್ತುತ ಸಾಮಾನ್ಯವಾಗಿ ಹೆಚ್ಚಿನ ಪ್ರದೇಶದಲ್ಲಿ ಬೆಳೆಯುತ್ತಿರುವ 53 ವಿವಿಧ ಕೃಷಿ ಮತ್ತು ತೋಟಗಾರಿಕಾ ಬೆಳೆಗಳಲ್ಲಿ ಕಂಡುಬರುವ 1000ಕ್ಕೂ ಹೆಚ್ಚು ಕೀಟ/ ರೋಗ ಬಾಧೆ ಹಾಗೂ |

| | | |
|---|---|---|
| | | ಪೋಷಕಾಂಶಗಳ ಕೊರತೆಯ ಗುರುತಿಸುವಿಕೆ ಮತ್ತು ನಿರ್ವಹಣೆಗೆ ವಹಿಸಬೇಕಾದ ಕ್ರಮಗಳ ಮಾಹಿತಿಯನ್ನು ಇ-ಸ್ಯಾಪ್ ತಂತ್ರಾಂಶದಲ್ಲಿ ಅಳವಡಿಸಲಾಗಿರುತ್ತದೆ.<br>• ನೈಜ ಸಮಯದಲ್ಲಿ ಕೀಟ, ರೋಗ ಬಾಧೆ ಹಾಗೂ ಪೋಷಕಾಂಶಗಳ ಕೊರತೆಯ ಪರಿಸ್ಥಿತಿಯನ್ನು ತಿಳಿಯಲು ಇಲಾಖೆಯಲ್ಲಿ ಕೃಷಿ ಮತ್ತು ಕೃಷಿ ಸಂಬಂಧಿತ ವಿಷಯಗಳಲ್ಲಿ ಪದವಿಯನ್ನು ಪಡೆದು ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಹಾಗೂ ಕೃಷಿ ಮತ್ತು ಕೃಷಿ ಸಂಬಂಧಿತ ವಿಷಯಗಳಲ್ಲಿ ಪದವಿ ಅಥವಾ ಡಿಪ್ಲೋಮಾ ವಿದ್ಯಾರ್ಹತೆಯನ್ನು ಹೊಂದಿ ಇಲಾಖೆಯಲ್ಲಿ ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯಗಳಲ್ಲಿ ಹಾಗೂ ವಿವಿಧ ಯೋಜನೆಗಳಡಿ ಹೊರಗುತ್ತಿಗೆಯಡಿ ಕಾರ್ಯನಿರ್ವಹಿಸುತ್ತಿರುವ ತಾಂತ್ರಿಕ ಸಿಬ್ಬಂದಿಯ ಮೂಲಕ ಆಯಾ ವ್ಯಾಪ್ತಿಯ ಪ್ರಮುಖ ಬೆಳೆಗಳಲ್ಲಿ ನಿಯಮಿತವಾಗಿ ಸಮೀಕ್ಷೆಯನ್ನು ಕೈಗೊಂಡು ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ.<br>• ಕಂಡುಬಂದ ಪೀಡೆಯ ತೀವ್ರತೆ, ಹವಾಮಾನ ಪರಿಸ್ಥಿತಿ, ಬೆಳೆಯ ಆರ್ಥಿಕ ಪ್ರಾಮುಖ್ಯತೆ ಆಧಾರದ ಮೇರೆಗೆ ಕೈಗೊಳ್ಳಬೇಕಾದ ಹಾಗೂ ಅನುಮೋದಿತ ನಿರ್ವಹಣಾ ಕ್ರಮಗಳ ಮಾಹಿತಿಯನ್ನು ರೈತರಿಗೆ ಬಳಕೆದಾರರ ಮೂಲಕ ಅಥವಾ ನೇರವಾಗಿ ವಾಟ್ಸ್‌ಆಪ್/ ಸಂದೇಶದ ಮೂಲಕ ಸಕಾಲದಲ್ಲಿ ನೀಡಲಾಗುತ್ತಿದೆ ಹಾಗೂ ಕ್ರಾಪ್ ಕ್ಯೂರ್ ಮೊಬೈಲ್ ಆಪ್ ಮೂಲಕವೂ ಸಹ ರೈತರು ತಮಗೆ ನೀಡಿರುವ ಸಲಹೆಗಳ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ.<br>• ಇ-ಸ್ಯಾಪ್ ತಂತ್ರಾಂಶದ ಬಳಕೆಯನ್ನು ತಾಂತ್ರಿಕವಾಗಿ ವಿದ್ಯಾರ್ಹತೆ ಹೊಂದಿರುವ ಕ್ಷೇತ್ರ ಸಿಬ್ಬಂದಿಯನ್ನು ಪರೀಕ್ಷೆಗೆ ಒಳಪಡಿಸಿ, ಅರ್ಹತೆ ಪಡೆದ ನಂತರ ಬಳಕೆಗೆ ಅನುಮತಿಸುತ್ತಿರುವುದರಿಂದ ಹೆಚ್ಚು ನಿಖರವಾಗಿ ನಿರ್ವಹಣಾ ಕ್ರಮಗಳನ್ನು ರೈತರಿಗೆ ಒದಗಿಸಲು ಸಹಕಾರಿಯಾಗುತ್ತಿದೆ.<br>• ಇ-ಸ್ಯಾಪ್ ಮೂಲಕ ನೀಡಲಾಗುವ ಶಿಫಾರಸ್ಸುಗಳು ಬೆಳೆಯ ಪರಿಸ್ಥಿತಿ, ಕೀಟ/ ರೋಗದ ತೀವ್ರತೆ ಹಾಗೂ ಅನುಮೋದಿತ ಶಿಫಾರಸ್ಸುಗಳಾಗಿರುವುದರಿಂದ ಅನಗತ್ಯ ರಾಸಾಯನಿಕ ಪೀಡೆನಾಶಕಗಳ ಬಳಕೆಯನ್ನು ಕಡಿತಗೊಳಿಸಲು ಸಹಕಾರಿಯಾಗುವುದರ ಜೊತೆಗೆ |

| | | |
|---|---|---|
| | | ಬೆಳೆಗಳಲ್ಲಿ ಪೀಡೆನಾಶಕ ಶೇಷಾಂಶ ತಗ್ಗಿಸಲು ಸಹಕಾರಿಯಾಗುತ್ತಿದೆ.<br>• ಕ್ಷೇತ್ರ ಮಟ್ಟದ ಬಳಕೆದಾರರು ಗುರುತಿಸಲಾಗದ ಸಮಸ್ಯೆಗಳನ್ನು ಪರಿಣಿತ ವಿಜ್ಞಾನಿಗಳಿಗೆ ರವಾನಿಸಿ, ಪರಿಣಿತ ವಿಜ್ಞಾನಿಗಳು ಸಮಸ್ಯೆಗಳನ್ನು ಗುರುತಿಸುವುದರ ಜೊತೆಗೆ ನಿರ್ವಹಣಾ ಕ್ರಮಗಳ ಮಾಹಿತಿಯನ್ನು ಬಳಕೆದಾರರ ಮೂಲಕ ಅಥವಾ ಕ್ರಾಪ್ ಕ್ಯೂರ್ ಆಪ್ ಮೂಲಕ ರೈತರಿಗೆ ಒದಗಿಸುವ ವ್ಯವಸ್ಥೆಯನ್ನು ತಂತ್ರಾಂಶದಲ್ಲಿ ಅಳವಡಿಸಲಾಗಿದೆ. |

ಸಂಖ್ಯೆ: AGRI/224/ACT/2026

P. M. Narendraswamy

**(ಪಿ. ಎಂ. ನರೇಂದ್ರ ಸ್ವಾಮಿ)**

ಕೃಷಿ ಸಚಿವರು